**<u>ಸಾಕ್ಷಿಯನ್ನು ದಿಃ 10.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಫಿರ್ಯಾದುದಾರರ ಮುಂದುವರೆದ ಸ್ವ ಇಚ್ಛಾ ಹೇಳಿಕೆ</u>** :

ದಿನಾಂಕಃ27.11.2016 ರಲ್ಲಿ ಡೆಪ್ಯೂಟಿ ರಿಜಿಸ್ಟರ್ ಕೋ-ಆಪರೇಟೀವ್ ಸೊಸೈಟಿ ರವರ ನೇತೃತ್ವದಲ್ಲಿ ಚುನಾವಣೆ ನಡೆಯಿತು. ಆ ಸಮಯದಲ್ಲಿ ನಾನು ಭಾಗವಹಿಸಿದೆನು. ಅದರಲ್ಲಿ ನಮ್ಮ ತಂಡದವರು ಗೆದ್ದಿದ್ದೇವೆ. ಅದರಲ್ಲಿ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದರು. 1ನೇ ಆರೋಪಿಯನ್ನು ಕಾರ್ಯದರ್ಶಿಯಾಗಿ ಆಯ್ಕೆ ಮಾಡಲಾಯಿತು. 2012 ರಿಂದ 16ರ ಅವಧಿಯಲ್ಲಿ 1ನೇ ಆರೋಪಿ ಖಜಾಂಚಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಹೊಸ ತಂಡ ಆಯ್ಕೆಯಾದ ನಂತರ 1ನೇ ಆರೋಪಿ ಕಾರ್ಯದರ್ಶಿಯಾದರು. ಹೊಸ ಕಮಿಟಿಗೆ ಹಳೆಯ ಕಮಿಟಿ ರವರು ಬುಕ್ಸ್ ಆಫ್ ಅಕೌಂಟ್ ಅನ್ನು ನೀಡಬೇಕಿತ್ತು. ಆ ಸಮಯದಲ್ಲಿ  ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಚರ್ಚ್ ಬಿಟ್ಟು ಹೋಗಿದ್ದಾರೆ ಕಾರಣ ಅವರು ನಮ್ಮ ಕಮಿಟಿಗೆ ನೀಡಲು

ಯಾವುದೇ ರೀತಿಯ ಬುಕ್ಸ್ ಆಫ್ ಅಕೌಂಟ್ ಇರಲಿಲ್ಲ. ಹಳೆ ಕಮಿಟಿರವರು ನಮಗೆ ಬುಕ್ಸ್ ಆಫ್ ಅಕೌಂಟ್ ಹಾಗೂ ಕೋ-ಆಪರೇಟಿವ್ ಸೊಸೈಟಿ ರಿನವಲ್ ಪ್ರಮಾಣಪತ್ರವನ್ನು ನಮ್ಮ ಕಮಟಿಗೆ ಕೊಟ್ಟಿಲ್ಲ. ಹೊಸ ಕಮಿಟಿ ರವರು ಸೊಸೈಟಿ ರಿನವಲ್ ಪ್ರಮಾಣಪತ್ರ ಇಲ್ಲದೆ ಬ್ಯಾಂಕ್ ಖಾತೆಯನ್ನು ಆಪರೇಟ್ ಮಾಡಲು ಆಗುವುದಿಲ್ಲ. ಹಳೆಯ ಖಜಾಂಚಿ ಸುಧಾಕರ್ ಆಗಿದ್ದ ಕಾರಣ ಬುಕ್ಸ್ ಆಫ್ ಅಕೌಂಟ್ ಬಗ್ಗೆ ಸುಧಾಕರ್ ಮೇಲೆ ಹಳೆಯ ಕಮಿಟಿ ರವರು ಹೇಳುತ್ತಾರೆ. ಈ ಸಮಯದಲ್ಲಿ ಸುಧಾಕರ್ ರವರು ಬುಕ್ಸ್ ಆಫ್ ಅಕೌಂಟ್ ಮತ್ತು ಆಡಳಿತಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕೊಡದೇ ಇದ್ದ ಕಾರಣ ಕ್ಲೊಸಿಂಗ್ ಬ್ಯಾಲೆನ್ಸ್ ಎಷ್ಟಿತ್ತು ಎಂದು ಮಾಹಿತಿ ಸಿಕ್ಕಿಲ್ಲ. ಆ ಕಾರಣದಿಂದಾಗಿ ನಮ್ಮ ಹೊಸ ಕಮಿಟಿ ಹೊಸ ಬ್ಯಾಂಕ್ ಖಾತೆಯನ್ನು ತೆರೆಯಲಾಯಿತು. ಆ ಹೊಸ ಬ್ಯಾಂಕ್ ಖಾತೆಯಲ್ಲಿ ಹಳೆಯ ಬ್ಯಾಲೆನ್ಸ್ ಯಾವುದು ಗೋಚರಿಸುವುದಿಲ್ಲ. ಸುಧಾಕರ್ ಮತ್ತು ಹಿಂದಿನ ಕಾರ್ಯದರ್ಶಿಯಾದ ಪಿ.ಜಾನ್ ರವರು ಹಿಂದಿನ ಬ್ಯಾಂಕ್ ಅಕೌಂಟ್ ಅನ್ನು ಕ್ಲೋಸ್ ಮಾಡಿದ್ದಾರೆ. ಅವರಿಬ್ಬರ ನಡುವೆ ವಿವಾದ ಉದ್ಭವಿಸಿದಾಗ ನಮ್ಮ ಸಂಘಕ್ಕೆ ಲಕ್ಷಗಟ್ಟಲೆ ಹಣವನು ದುರುಪಯೋಗ ಮಾಡಿದ್ದಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಇಟ್ಟಿಲ್ಲ. ಬುಕ್ಸ್ ಆಫ್ ಅಕೌಂಟ್ ಅನ್ನು ಸುಧಾಕರ್ ಬಳಿ ಕೇಳಿದಾಗ ಅವರು ಎಲ್ಲರಿಗೂ ಫೋನ್ ಮಾಡಿ ಕೇಳಲು ಶುರು ಮಾಡಿದರು ಹಾಗೂ ಎಲ್ಲರಿಗೂ ಬೆದರಿಕೆ ಹಾಕುತ್ತಿದ್ದರು. ಹೊಸದಾಗಿ ಬುಕ್ಸ್ ಆಫ್ ಅಕೌಂಟ್ ಮತ್ತು ಹಣದ ವ್ಯವಹಾರ ಮಾಡಿಕೊಂಡು ಹೋಗು ಎಂದಾಗ ನಮ್ಮ ಹೊಸ ಕಮಿಟಿರವರು ಯಾರು ಒಪ್ಪಿ ಕೊಂಡಿಲ್ಲ. ಸುಧಾಕರ್ ರವರು ದುಂಡವರ್ತನೆ ತೋರಿದರು. ಹಾಗಾಗಿ ನಾನು ಡೆಪ್ಯೂಟಿ ರಿಜಿಸ್ಟರರ್ ಆಫ್ ಸೊಸೈಟಿ ರವರನ್ನು ಭೇಟಿ ಮಾಡಿ ದೂರು ಕೊಟ್ಟೆನು. ಆಗ ಅವರು ಪೊಲೀಸ್ ಠಾಣೆಗೆ ದೂರು ಕೊಡುವಂತೆ ಹೇಳಿದರು. ಅದರಂತೆ ಪೊಲೀಸರಿಗೆ ದೂರು ನೀಡಿದೆನು. ಪೊಲೀಸರು ಆ ದೂರಿನ ಬಗ್ಗೆ ತನಿಖೆ ಮಾಡಿರುತ್ತಾರೆ. ಸೊಸೈಟಿ ರವರು ಸಹ ತನಿಖೆ ಆರಂಭಿಸಿದರು. ಸುಧಾಕರ್

ರವರು ಸೊಸೈಟಿಗೆ ಒಂದು ಬೆದರಿಕೆ ರೀತಿಯಲ್ಲಿ ಪತ್ರ ಬರೆದಿದ್ದಾರೆ. ಇಲ್ಲಿಯವರೆಗೆ ಸೊಸೈಟಿ ಯೊಂದಿಗೆ ನಮ್ಮ ಸಂಪರ್ಕ ಇತ್ತು, ಇನ್ನು ಮುಂದೆ ನನಗೆ ಮತ್ತು ಸೊಸೈಟಿಗೆ ಸಂಬಂಧವಿಲ್ಲ ಮತ್ತು ಯಾವುದೇ ನೋಟೀಸು ನೀಡಬಾರದೆಂದು ಹಾಗೂ ಒಬ್ಬ ಸರ್ಕಾರಿ ಅಧಿಕಾರಿ ಪವನ್ ಕುಮಾರ್ ಎಂಬುವವರಿಗೆ ರೂ.2 ಲಕ್ಷ ಹಣ ಕೊಟ್ಟಿರುವುದಾಗಿ ಸುಧಾಕರ್ ರವರು ಒಂದು ಪತ್ರವನ್ನು ಡೆಪ್ಯೂಟಿ ರಿಜಿಸ್ಟರರ್ ಕೋ-ಆಪರೇಟಿವ್ ಸೊಸೈಟಿಗೆ ನೀಡಿದ್ದಾರೆ.

ಈ ರೀತಿ ಮಾಡಲು ಸುಧಾಕರ್ ರವರಿಗೆ ಚರ್ಚ್ ಮತ್ತು ಸೊಸೈಟಿ ಒತ್ತಡ ಕಾರಣ ಆಗುತ್ತದೆ. ನಮಗೆ ಕಾಣಿಕೆ ರೂಪದಲ್ಲಿ, ವಿಶೇಷ ಸೇವೆಗಳಿಂದ ನಮಗೆ ಪ್ರತಿ ವಾರ ರೂ. 30 ಸಾವಿರ ಹಣ ಬರುತ್ತದೆ. ಆ ಹಣ ಎಲ್ಲಿಗೆ ಜಮೆ ಆಗುತ್ತದೆ ಮತ್ತು ಯಾರಿಗೆ ಹೋಗುತ್ತದೆ ಎಂಬ ಬಗ್ಗೆ ಮಾಹಿತಿ ಇಲ್ಲ. 2013-14 ರಲ್ಲಿ ಬೂದಿಗೆರೆಯಲ್ಲಿ ಹೊಸ ಚರ್ಚ್ ಅನ್ನು ಪ್ರಾರಂಭಿಸಿದ್ದು ಈವರೆವಿಗೂ ಎಷ್ಟು ಖರ್ಚು ಆಗಿದೆ ಎಂಬ ಬಗ್ಗೆ ಲೆಕ್ಕ ಪತ್ರ ಕೊಟ್ಟಿಲ್ಲ. ಆ ಅವಧಿಯಲ್ಲಿದ್ದ ಅಧ್ಯಕ್ಷರಲ್ಲಿ ಲೆಕ್ಕ ಕೇಳಿದಾಗ, ಸುಧಾಕರ್ ರವರು ಖಜಾಂಚಿಯಾಗಿ ಹಣ ದುರುಪಯೋಗ ಮಾಡಿದ್ದಾರೆ ಎಂದು ರೂ.90 ಲಕ್ಷದ ಸ್ಟೇಟ್‌ಮೆಂಟ್ ಕೊಟ್ಟಿರುತ್ತಾರೆ. ಈ ಬಗ್ಗೆ ಲೆಕ್ಕ ಕೇಳಿದಾಗ ನಮ್ಮ ಮೆಂಬರ್ ಶಿಪ್ ಅನ್ನು ತೆಗೆದು ಹಾಕುವುದಾಗಿ ಬೆದರಿಕೆ ಹಾಕಿದ್ದಾರೆ. ದಿಃ01.02.2019 ರಂದು ಸುಧಾಕರ್ ರವರು ಯಾರಿಗೂ ಮಾಹಿತಿ ನೀಡದೆ ಆರೋಪಿತರನು ಸೇರಿಸಿಕೊಂಡು ಅಕ್ರಮ ಟ್ರಸ್ಟ್ ಮಾಡಿಕೊಂಡು ದಿಃ20.10.2020 ರವರೆಗೆ ನಡೆಸಿರುತ್ತಾರೆ. ಸಬ್‌ಸ್ಕ್ರಿಷನ್ ಹಣವನ್ನು ಟ್ರಸ್ಟ್ ಹೆಸರಿನಲ್ಲಿ ಕಲೆಕ್ಟ್ ಮಾಡಿದ್ದಾರೆ. ಅವರು ಈವರೆವಿಗೂ ಬುಕ್ಸ್ ಆಫ್ ಅಕೌಂಟ್ ಅನ್ನು ಕೊಟ್ಟಿಲ್ಲ. ನಮ್ಮ ಸಂಘಕ್ಕೆ ಅಥವಾ ಸರ್ಕಾರಕ್ಕೆ ಸುಧಕಾರ್ ರವರು ಯಾವುದೇ ದಾಖಲಾತಿ ಕೊಟ್ಟಿಲ್ಲ. ನಾನು ಡೆಪ್ಯೂಟಿ ರಿಜಿಸ್ಟರ್ ಕೋ-ಆಪರೇಟೀವ್ ಸೊಸೈಟಿ ರವರಿಗೆ ದೂರು ನೀಡಿದಾಗ ನಿಯಮ 25 ರ ಅಡಿಯಲ್ಲಿ ವಿಚಾರಣೆ ನಡೆಸಿರುತ್ತಾರೆ. ಆ ಪ್ರಕರಣ ದಾಖಲಾದ ತಕ್ಷಣ ಸುಧಾಕರ್ ರವರು ಟ್ರಸ್ಟ್ ಡೀಡ್ ಅನ್ನು ಕ್ಯಾನ್ಸಲ್ ಮಾಡಿರುತ್ತಾರೆ. ಟ್ರಸ್ಟ್ ಡೀಡ್

ನಲ್ಲಿ ಸುಧಾಕರ್ ರವರು ಮಾಡಿರುವ ತಪ್ಪನ್ನು ಒಪ್ಪಿಕೊಂಡಿದ್ದಾರೆ. ನಮ್ಮ ಸೊಸೈಟಿ 2012-13 ರ ಸಾಲಿಗೆ ನೊಂದಣಿ ಆಗಿದೆ. 2013 ರಿಂದ ಇಲ್ಲಿಯವರೆಗೆ ಸೊಸೈಟಿ ನವೀಕರಣ ಆಗಿಲ್ಲ.

ಮುಂದುವರೆದ ಪ್ರಮಾಣೀಕೃತ ಹೇಳಿಕೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯ ನೀಡಿದ ಹೇಳಿಕೆಯನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**4ನೇ ಅ ಮು ನ್ಯಾ ದಂ ನ್ಯಾ**